ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

**ಸಿಸಿ ನಂ. 1430/2022**

ಚಾಸಾ-04 ಫ್ರಾಸಾ-01

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 05.04.2025

| | | |
|---|---|---|
| ಹೆಸರು | : | ವಿಶ್ವನಾಥ |
| ತಂದೆಯ ಹೆಸರು | : | ಸಿಧ್ರಾಮಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | PC-124 |
| ವಾಸಸ್ಥಳ | : | ಅಫಜಲಪೂರ ಪೋ.ಠಾ. |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2021 ರಿಂದ ಸಧ್ಯದ ವರೆಗೆ ಅಫಜಲಪೂರ ಪೋಲಿಸ ಠಾಣೆಯಲ್ಲಿ ಪೋಲಿಸ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 04.09.2022 ರಂದು ನಾನು, ಚಾಸಾ-1, ಚಾಸಾ-5 ರವರು ಸೇರಿಕೊಂಡು ಕರಜಗಿ ಗ್ರಾಮದಲ್ಲಿ ಗಣೇಶ ವಿಸರ್ಜನೆ ಕುರಿತು ಬಂದಾಬಸ್ತ ಕರ್ತವ್ಯ ಮುಗಿಸಿಕೊಂಡು ರಾತ್ರಿ 08.15 ಕ್ಕೆ ಠಾಣೆಗೆ ಮರಳುತ್ತಿರುವಾಗಿ ಕರಜಗಿ ಪೆಟ್ರೋಲ್ ಪಂಪ ಹತ್ತಿರ ನಿಂತಿದ್ದಾಗ ಪೋಲಿಸ ಬಾತ್ಮಿದಾರರೊಬ್ಬರ ಚಾಸಾ-1 ರವರಿಗೆ ದೂರವಾಣಿ ಕರೆ ಮಾಡಿ ಭಾಸಗಿ ಗ್ರಾಮದಲ್ಲಿ ಅಕ್ರಮವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆ ಅಂತಾ ಬಾತ್ಮಿ ನೀಡಿದ್ದು, ಸದರಿ ಬಾತ್ಮಿ ಬಂದ ಕಾರಣ ಅಲ್ಲೇ ಸ್ಥಳದಲ್ಲಿಯೇ ಇಬ್ಬರು ವ್ಯಕ್ತಿಗಳನ್ನು ಕರೆದು ಅವರಿಗೆ ಬಾತ್ಮಿ ಬಂದ ವಿಷಯ ತಿಳಿಸಿ ಮತ್ತು ನಾವು ಕೈಗೊಳ್ಳುವ ದಾಳಿಗೆ ಪಂಚರಾಗಿ ಸಹಕರಿಸಲು ಕೇಳಿಕೊಂಡಿದ್ದರಿಂದ ಸದರಿ ವ್ಯಕ್ತಿಗಳು ಪಂಚರಾಗಲು ಒಪ್ಪಿಕೊಂಡಿರುತ್ತಾರೆ.

ನಂತರ ಭಾಸಗಿ ಗ್ರಾಮಕ್ಕೆ ಹೋಗುತ್ತಿರುವಾಗ ಭಾಸಗಿ ಗ್ರಾಮದಿಂದ ಬಂಕಲಗಿ ಗ್ರಾಮಕ್ಕೆ ಹೋಗುವ ರಸ್ತೆಯ ಮೇಲೆ ಒಂದು ಮರಳು ತುಂಬಿದ 407 ವಾಹನವು ಬರುತ್ತಿರುವುದನ್ನು ಕಂಡು ಚಾಸಾ-1 ರವರು ಅದನ್ನು ತಡೆದು ನಿಲ್ಲಿಸಲು ಸೂಚಿಸಿರುತ್ತಾರೆ. ತದ ನಂತರ ವಾಹನವು ನಿಲ್ಲಿಸಿದ ನಂತರ ಪಂಚರ ಸಮಕ್ಷಮ ಸದರಿ ವಾಹನವನ್ನು ಪರಿಶೀಲನೆ ಮಾಡಿ ನೋಡಿದಾಗ ಅದರಲ್ಲಿ ಮರಳು ತುಂಬಿರುವುದು ಕಂಡು ಬಂದಿರುತ್ತದೆ. ಸದರಿ ವಾಹನದ ಚಾಲಕನಿಗೆ ಪರವಾನಿಗೆ ಕುರಿತು ವಿಚಾರಿಸಿದಾಗ ಆತನು ಯಾವುದೇ ಪರವಾನಿಗೆ ಇಲ್ಲಾ ಎಂದು ತಿಳಿಸಿರುತ್ತಾನೆ. ತದ ನಂತರ ವಾಹನವನ್ನು ಮತ್ತು ಚಾಲಕನನ್ನು ಠಾಣೆಗೆ ಬಂದು ಠಾಣಾಧಿಕಾರಿಯವರಿಗೆ ವರದಿ ಸಲ್ಲಿಸಿರುತ್ತೇವೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ **SSP** ವಕೀಲರಿಂದಃ-

ಪಂಚರನ್ನು ಬರಮಾಡಿಕೊಂಡಾಗ ಸಮಯ 08.25 ಗಂಟೆ ಆಗಿತ್ತು. ದಾನೇಶ್ವರಿ ಪಟ್ರೋಲ ಪಂಪನಲ್ಲಿ ನಿಂತಿದ್ದೆವು. ಪಟ್ರೋಲ ಪಂಪನ ಹೆಸರು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಗುನ್ನೆ ಸ್ಥಳದ ಚೆಕ್ ಬಂದಿಯನ್ನು ಈಗ ನನಗೆ ಹೇಳಲು ಬರುವುದಿಲ್ಲಾ, ಆದರೆ ವಾಹನವನ್ನು ರಸ್ತೆಯ ಮೇಲೆ ತಡೆದು ನಿಲ್ಲಿಸಿರುತ್ತೇವೆ. ನಾವು ವಾಹನವನ್ನು ನಿಲ್ಲಿಸಿದಾಗ ಸಮಯ 08.40 ಗಂಟೆ ಆಗಿರಬಹುದು. ತಡೆದು ನಿಲ್ಲಿಸಿ ವಾಹನವನ್ನು ಪರಿಶೀಲನೆ ಮಾಡಿ ಅದರಲ್ಲಿ ಮರಳು ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವೇಳೆಯಲ್ಲಿ ಈ ಆರೋಪಿ ಇದ್ದಾ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗುನ್ನೆ ಸ್ಥಳದಲ್ಲಿ ರಾತ್ರಿ ಆದ ಕಾರಣ ಭಾವಚಿತ್ರಗಳನ್ನು ತೆಗೆದಿರುವುದಿಲ್ಲಾ, ಆದರೆ ಠಾಣೆಯಲ್ಲಿ ತೆಗೆದಿರುತ್ತೇವೆ. ಚಾಸಾ-1 ರವರು ನನ್ನ ಮೇಲಾಧಿಕಾರಿಯಾಗಿದ್ದರಿಂದ ಅವರ ನೀಡಿದ ದೂರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ಬಂದಾಬಸ್ತಗೆ ಹೋಗಿಲ್ಲ, ಯಾವುದೇ ದಾಳಿ ಮಾಡಿಲ್ಲಾ ಕಚೇರಿಯ ಅಂಕಿ-ಅಂಶಗಳಿಗೊಸ್ಕರ ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ - ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ